## ಶಿಕ್ಷಕರೇ ಗಮನಿಸಿ

# ಶಿಕ್ಷಕರಿಗೆ ಮನಶ್ಶಾಸ್ತ್ರದ ಅಧ್ಯಯನದ ಆವಶ್ಯಕತೆ

ಪ್ರೊ. ಎಸ್. ದಂಡಪಾಣಿ

**ಮ**ನಶ್ಶಾಸ್ತ್ರ ಎಂದರೇನು? ಶಿಕ್ಷಕರು ಏಕೆ ತಾನೇ ಮನಶ್ಶಾಸ್ತ್ರವನ್ನು ಓದಬೇಕು? ಅದಕ್ಕಾಗಿ ಮನಶ್ಶಾಸ್ತ್ರದ ಈ ಕೆಳಗಿನ ವ್ಯಾಖ್ಯಾನವನ್ನು ನೋಡೋಣ : Psychology is a study of human and animal behaviour – "ಮನಶ್ಶಾಸ್ತ್ರವೆಂದರೆ ಮಾನವನ ಮತ್ತು ಪ್ರಾಣಿಗಳ ನಡವಳಿಕೆಯ ಅಧ್ಯಯನ." ಹಾಗಾದರೆ behaviour ಅಥವಾ ನಡವಳಿಕೆ ಎಂದರೇನು? ಒಬ್ಬ ವ್ಯಕ್ತಿಯ ಯಾವುದೋ **'ಒಂದು'** ಇತರರಿಗೆ ಕಾಣಿಸಿಕೊಳ್ಳುತ್ತದೆ. ಅದನ್ನೇ **'ನಡವಳಿಕೆ'** ಎಂದು ಕರೆಯಬಹುದು. ಓಡುವುದು, ಮಾತನಾಡುವುದು, ಅಳುವುದು, ನಗುವುದು, ಊಟಮಾಡುವುದು – ಇವೆಲ್ಲವೂ ಇತರರಿಗೆ ಕಾಣಿಸಿಕೊಳ್ಳುವ ಬಾಹ್ಯ ನಡವಳಿಕೆಗಳು. ನೀವು ಕೇಳಬಹುದು, ಒಬ್ಬ ವ್ಯಕ್ತಿ ಏಕೆ ಓಡುತ್ತಾನೆ, ಮಾತನಾಡುತ್ತಾನೆ ಇತ್ಯಾದಿ. ಆಗ ನೀವು ಆ ಚಟುವಟಿಕೆಗಳ ಹಿಂದಿನ motive ಅಥವಾ 'ಪ್ರೇರಣೆ'ಯನ್ನು ಕಂಡುಹಿಡಿಯಬೇಕಾಗುತ್ತದೆ. ಆದರೆ ಈ 'ಪ್ರೇರಣಾಶಕ್ತಿ'ಯನ್ನು ನೀವು ನೇರವಾಗಿ ಗ್ರಹಿಸಲಾರಿರಿ. ಅದನ್ನು ನೀವು ಬಾಹ್ಯ ನಡವಳಿಕೆಯ ಮೂಲಕವಷ್ಟೇ ಊಹಿಸಿಕೊಳ್ಳಬಹುದು. ಆದರೆ ನಮ್ಮ ಈ ಊಹೆ ಯಾವತ್ತೂ ಕರಾರುವಾಕ್ಕಾಗಿ ಇರಬೇಕೆಂದೇನೂ ಇಲ್ಲ.

ನಿಮ್ಮ ಒಬ್ಬ ಸ್ನೇಹಿತ ಬಹಳ ಹರ್ಷದಿಂದ ಇರುವಂತೆ ವರ್ತಿಸುತ್ತಿದ್ದಾನೆ ಎಂದುಕೊಳ್ಳಿ. ಇದರಿಂದಷ್ಟೇ ಅವನು ತಾನೇತಾನಾಗಿ 'ಸಂತೋಷ'ವಾಗಿ ಇದ್ದಾನೆಂದು ನೀವು ಊಹಿಸಲು ಸಾಧ್ಯವೇ? ಅವನು ನಿಜವಾಗಿಯೂ ಸಂತೋಷವಾಗಿರಲಿಕ್ಕೂ ಸಾಕು. ಆದರೆ ಅವನು ತನ್ನ ನಿಜವಾದ 'ಭಾವನೆ'ಗಳನ್ನು ಅಡಗಿಸಿಕೊಂಡು 'ಸಂತೋಷ'ವಾಗಿರುವಂತೆ ನಟಿಸುತ್ತಿರಲೂಬಹುದು. ಆದ್ದರಿಂದ ಮನಶ್ಶಾಸ್ತ್ರವನ್ನು 'ಕರಾರುವಾಕ್ಕಾದ ವಿಜ್ಞಾನ'ವೆಂದು ಕರೆಯಲು ಸಾಧ್ಯವಿಲ್ಲ. ಆದರೆ ಭೌತಶಾಸ್ತ್ರ, ಗಣಿತ ಮತ್ತು ರಸಾಯನಶಾಸ್ತ್ರಗಳನ್ನು ಕರಾರುವಾಕ್ಕಾದ ವಿಜ್ಞಾನಶಾಸ್ತ್ರಗಳೆಂದು ಕರೆಯಬಹುದು. ಅವುಗಳಲ್ಲಿ ಪರೀಕ್ಷಿಸಲ್ಪಡುವ ಭೌತಿಕ ಪ್ರಕ್ರಿಯೆಗಳನ್ನು ನಾವು ಕರಾರುವಾಕ್ಕಾಗಿ ಹೀಗೆಯೇ ಎಂದು ಊಹಿಸಲು ಸಾಧ್ಯ. ಆದರೆ ಮಾನವನ ನಡವಳಿಕೆಯನ್ನು ಹಾಗೆ ಊಹಿಸಲು ಸಾಧ್ಯವಿಲ್ಲ. ಮನಶ್ಶಾಸ್ತ್ರವು ಕರಾರುವಾಕ್ಕಾದ ವಿಜ್ಞಾನವಾಗದಿರುವುದಕ್ಕೆ ಕಾರಣ, 'ನಾವು', 'ನೀವು'ಗಳೇ. ಏಕೆಂದರೆ ಮನುಷ್ಯರಾದ ನಮ್ಮ ಯಾವ ನಡವಳಿಕೆಯೂ ಕರಾರುವಾಕ್ಕಾಗಿ ಇರುವುದಿಲ್ಲವಷ್ಟೇ.

ಹಾಗಾದರೆ ಶಿಕ್ಷಕರಾದ ನಾವು ಮನಶ್ಶಾಸ್ತ್ರವನ್ನು ಏಕೆ ತಾನೇ ಅಧ್ಯಯನ ಮಾಡಬೇಕು? ಅದಕ್ಕೆ ಈ ಕೆಳಗಿನ ಕಾರಣಗಳನ್ನು ನೀಡಬಹುದು :

**೧. ಏಕೆಂದರೆ ವಿದ್ಯಾರ್ಥಿಗಳ ನಡವಳಿಕೆಗೆ ಕಾರಣವನ್ನು ತಿಳಿದುಕೊಳ್ಳಲು ನಾವು ಇಷ್ಟಪಡುತ್ತೇವೆ. ೨. ವಿದ್ಯಾರ್ಥಿಗಳ ನಡವಳಿಕೆಯನ್ನು ತಿದ್ದಲು ನಾವು ಇಚ್ಛಿಸುತ್ತೇವೆ. ೩. ಪರಿಣಾಮಕಾರಿ ಬೋಧನೆಗೆ ಅವಶ್ಯವಾದ ಆತ್ಮೀಯ ವಾತಾವರಣವನ್ನು ನಮ್ಮ ಶಾಲಾಕೊಠಡಿಯಲ್ಲಿ ನಿರ್ಮಾಣ ಮಾಡಲು ಆಶಿಸುತ್ತೇವೆ. ೪. ವಿದ್ಯಾರ್ಥಿಗಳಲ್ಲಿ ಕಲಿಕೆಯ ಬಗ್ಗೆ ಆಸಕ್ತಿಯನ್ನು ಕೆರಳಿಸಲು ಇಷ್ಟಪಡುತ್ತೇವೆ. ೫. ಸಮಸ್ಯಾತ್ಮಕ ಬಾಲಕರು ಮತ್ತು ಬಾಲಕಿಯರನ್ನು ಆಯ್ದು, ಅವರ ನಡವಳಿಕೆಯ ಮತ್ತು ಕಲಿಕಾ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ಒದಗಿಸಲು ಇಚ್ಛಿಸುತ್ತೇವೆ. ೬. ನಮ್ಮ ವಿದ್ಯಾರ್ಥಿಗಳ ಬುದ್ಧಿಮಟ್ಟವನ್ನು ತಿಳಿದುಕೊಂಡು, ಅದರ ಪ್ರಕಾರ ನಮ್ಮ ಬೋಧನೆಯ ವಿಧಾನವನ್ನು ಮಾರ್ಪಡಿಸಿಕೊಳ್ಳಲು ಬಯಸುತ್ತೇವೆ. ೭. ನಮ್ಮ ಲೋಪದೋಷಗಳ ಬಗ್ಗೆ ಅರಿತುಕೊಂಡು, ಅವುಗಳನ್ನು ಸರಿಪಡಿಸಿಕೊಳ್ಳಲು ಇಚ್ಛಿಸುತ್ತೇವೆ.**


ನಮ್ಮ ತರಗತಿಯಲ್ಲಿ ಕೆಲವು ವಿದ್ಯಾರ್ಥಿಗಳು ಅನುತ್ತೀರ್ಣರಾದರೆಂದು ಇಟ್ಟುಕೊಳ್ಳೋಣ. ಅದಕ್ಕೆ ಕಾರಣ ಏನು? ನಮ್ಮ ಬೋಧನೆ ಅವರಿಗೆ ಅರ್ಥವಾಗದೆ ಇದ್ದಿರಬಹುದು. ಆದ್ದರಿಂದ ಮನಶ್ಶಾಸ್ತ್ರದ ಪರಿಜ್ಞಾನ ಶಿಕ್ಷಕರಿಗೆ ಅನಿವಾರ್ಯ. ಆದರೆ ಒಂದು ಸಂಗತಿಯನ್ನು ನೆನಪಿನಲ್ಲಿ ಇಟ್ಟುಕೊಳ್ಳಿ. ನಾವು ಭೌತಶಾಸ್ತ್ರ, ಗಣಿತಶಾಸ್ತ್ರ, ಇಂಗ್ಲಿಷ್ ಮತ್ತಿತರ ವಿಷಯಗಳಲ್ಲಿಯೂ ಪ್ರವೀಣರಾಗಿರಬೇಕು. ಈ ಎಲ್ಲ ಪಠ್ಯವಿಷಯಗಳನ್ನು ಬೋಧಿಸುವ ಪರಿಣಾಮಕಾರಿ ವಿಧಾನವೊಂದನ್ನು ರೂಪಿಸಿಕೊಳ್ಳುವುದಕ್ಕೆ ಮನಶ್ಶಾಸ್ತ್ರವು ನಮಗೆ ಸಹಾಯ ಮಾಡುತ್ತದೆ. ಅದಕ್ಕೆಂದೇ ಮನಶ್ಶಾಸ್ತ್ರದ ಅಧ್ಯಯನ ಶಿಕ್ಷಕರಿಗೆ ಅತ್ಯವಶ್ಯಕ.

(ಆಧಾರ: *Educational Psychology, Simplified* by Prof. S. Dandapani)

ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರು ವಿಶಿಷ್ಟಾದ್ವೈತ ತತ್ತ್ವ ಮತ್ತು ಅದರ ಪ್ರವರ್ತಕರಾದ ಶ್ರೀರಾಮಾನುಜಾಚಾರ್ಯರ ಬಗ್ಗೆ ತಳೆದ ನಿಲುವುಗಳನ್ನು ವಿದ್ವತ್ಪೂರ್ಣವಾದ ಭಾಷೆಯಲ್ಲಿ ಈ ಲೇಖನದಲ್ಲಿ ಬಿಂಬಿಸಲಾಗಿದೆ. ಈ ಅಧ್ಯಯನವು ಎಲ್ಲ ತಾತ್ತ್ವಿಕ ದರ್ಶನಗಳಲ್ಲಿಯೂ ಉದಾರನೀತಿಯನ್ನು ಬೆಳೆಸಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ. ಇಂಥ ಅಮೂಲ್ಯ ಬರಹವನ್ನು ನಮಗಿತ್ತಿರುವ ಮಾನ್ಯ ಲೇಖಕರು ಶೃಂಗೇರಿಯ ಕಾಲೇಜೊಂದರಲ್ಲಿ ಅಧ್ಯಾಪಕರಾಗಿದ್ದರು. ಮೈಸೂರು ಆಶ್ರಮವು ಪ್ರಕಟಿಸಿರುವ ಹಲವಾರು ಗ್ರಂಥಗಳ ಅನುವಾದ ಕಾರ್ಯವನ್ನು ಮಾಡಿಕೊಟ್ಟಿದ್ದ ಶ್ರೀಯುತರು, ಮೈಸೂರು ವಿಶ್ವವಿದ್ಯಾನಿಲಯದ ವಿವೇಕಾನಂದ ಪೀಠದ ಸಂದರ್ಶಕ ಪ್ರಾಧ್ಯಾಪಕರೂ ಆಗಿದ್ದರು.

# ರಾಮಾನುಜರನ್ನು ಕುರಿತು ಸ್ವಾಮಿ ವಿವೇಕಾನಂದರು

ಡಾ. ಎಚ್. ರಾಮಚಂದ್ರಸ್ವಾಮಿ



**ಸ್ವಾ**ಮಿ ವಿವೇಕಾನಂದರು ಹನ್ನೊಂದನೆಯ ಶತಮಾನದ ರಾಮಾನುಜಾಚಾರ್ಯರ ವಿಶಿಷ್ಟಾದ್ವೈತದ ಮೇಲೆ ಮಾತನಾಡಿದ್ದು, ಅವರ ಕೃತಿಗಳ ಬಗ್ಗೆ ಬರೆದದ್ದು ಕಡಿಮೆಯೇ. ಪ್ರಸ್ಥಾನತ್ರಯಗಳ ಭಾಷ್ಯಕಾರರುಗಳಲ್ಲಿ ಯಾರನ್ನೇ ಕುರಿತು ಮಾತನಾಡಬೇಕೆಂದು ಅವರು ವಿಶೇಷವಾಗಿ ಯತ್ನಿಸಿದ್ದೇ ಇಲ್ಲ. ತಮ್ಮದೇ ವೇದಾಂತ ತತ್ತ್ವದ ಪ್ರವರ್ತಕರಾಗಿ ಮಾತನಾಡುವಾಗ, ಪ್ರಾಸಂಗಿಕವಾಗಿ ಈ ಆಚಾರ್ಯರುಗಳ ಬಗ್ಗೆ ಹೇಳಿರುವುದಷ್ಟೆ. ಆದರೆ ಮತಾಚಾರ್ಯರುಗಳ ಮೇಲೆ ಅವರು ಆಡಿದ ಈ ಪ್ರಾಸಂಗಿಕ ಮಾತುಗಳು, ಭಾರತದ ಪುನರ್ನವೀಕೃತ ಪ್ರಾಚೀನ ವಿವೇಕವೆನ್ನಬಹುದಾದ ಅವರದೇ ಆದ ವೇದಾಂತತತ್ತ್ವದ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತವೆ. ವೇದಾಂತವನ್ನು ಕುರಿತಾದ ವಿವೇಕಾನಂದರ ಮಾತುಗಳ ಮೇಲೆ ಹಸ್ಟನ್ ಸ್ಮಿತ್ ಎಂಬ ಅಮೆರಿಕಾದ ತತ್ತ್ವ ಶಾಸ್ತ್ರಜ್ಞರು, ಸ್ವಾಮಿ ಚೇತನಾನಂದರು ವಿವೇಕಾನಂದರ ಕೃತಿಗಳಿಂದ ಆಯ್ದು ಪ್ರಕಟಿಸಿರುವ 'Vedanta : Voice of Freedom' ಎಂಬ ಪುಸ್ತಕದ ಮುನ್ನುಡಿಯಲ್ಲಿ, "If we listen through the words to the thoughts they express, we know that Vivekananda is their conduit only, not their author" (ವಿವೇಕಾನಂದರ ಮಾತುಗಳ ಮೂಲಕ ಅಭಿವ್ಯಕ್ತಿಸುವ ಚಿಂತನೆಗಳನ್ನು ಆಲಿಸಿದರೆ, ವಿವೇಕಾನಂದರು ಅವನ್ನು ಸಂವಹಿಸಿದರೇ ಹೊರತು ಅವು ಅವರ ಸೃಜನೆಗಳಲ್ಲ ಎನ್ನಿಸದಿರದು) ಎಂದಿರುವರು. ಅದೇ ಪುಸ್ತಕದ ಮೊದಲ ಮಾತಿನಲ್ಲಿ ಕ್ರಿಸ್ಟೊಫರ್ ಇಷರ್‌ವುಡ್, "ವಿವೇಕಾನಂದರ ಸಂದೇಶವನ್ನು ಗ್ರಹಿಸುವುದೆಂದರೆ ಅದೊಂದು ಅನುಭವವೇ ಸರಿ" ಎಂದು ನುಡಿದಿರುವರು.

ಅದ್ವೈತ ಹಾಗೂ ವಿಶಿಷ್ಟಾದ್ವೈತ ಎಂಬೆರಡು ಪ್ರಧಾನ ವೇದಾಂತ ಮತಗಳು ನಮ್ಮ ಪರಂಪರೆಯಲ್ಲಿ ಇನ್ನುಳಿದ ದ್ವೈತ, ದ್ವೈತಾದ್ವೈತ ಮುಂತಾದುವುಗಳಿಗಿಂತ ಮುಖ್ಯವಾದುವು. ಪುರಾತನ ಅದ್ವೈತಮತಕ್ಕೆ ಮೊದಲನೆಯ ಮುಖ್ಯ ಪ್ರತಿಕ್ರಿಯೆಯಾಗಿ ಪ್ರಚುರಗೊಂಡದ್ದೇ ರಾಮಾನುಜರ ವಿಶಿಷ್ಟಾದ್ವೈತ. ಅದ್ವೈತದ ಅತಿರಿಕ್ತ ಏಕಭಾವನೆಯನ್ನು ವಿರೋಧಿಸಿ ದ್ವೈತಕ್ಕೇ ಸಮೀಪವೆನ್ನಬಹುದಾಗಿ ನಿಂತ ನಿಲುವು ಈ ವಿಶಿಷ್ಟಾದ್ವೈತ. ವ್ಯಕ್ತಿಯು ತನ್ನ ಇಷ್ಟದೇವತೆಯ ಮೇಲೆ ಇರಿಸುವ ಭಕ್ತಿಯನ್ನು ಎತ್ತಿಹಿಡಿಯುವ ರಾಮಾನುಜರು ದ್ವೈತಿಯೇ ಸರಿ, ಇದರಲ್ಲಿ ಸಂದೇಹವಿಲ್ಲ. ಸ್ವಾಮಿ ವಿವೇಕಾನಂದರು ತಮ್ಮ ವೇದಾಂತತತ್ತ್ವವನ್ನು ಪ್ರಚುರಪಡಿಸುವ ಮುನ್ನ ಈ ಎರಡು ವಿಭಿನ್ನ ನಿಲುವುಗಳನ್ನೂ ಎಲ್ಲ ದೃಷ್ಟಿಗಳಿಂದಲೂ ಪರಿಗಣಿಸಿ, ತೂಗಿ ನೋಡಿದ್ದರು.

ರಾಮಾನುಜರು ಇಂದಿನ ತಮಿಳು ನಾಡಿನ ಶ್ರೀಪೆರಂಬುದೂರಿನಲ್ಲಿ ಕ್ರಿ. ಶ. ೧೦೨೭ರಲ್ಲಿ ಹುಟ್ಟಿದರು. ಕಾಂಚೀಪುರದಲ್ಲಿದ್ದ ಯಾದವಪ್ರಕಾಶ ಎಂಬ ಗುರುವಿನ ಬಳಿ ವೇದಾಂತ ವಿದ್ಯಾಭ್ಯಾಸಕ್ಕೆಂದು ಸೇರಿದ ಅವರು, ಗುರುವಿನ ಅದ್ವೈತದ ನಿಲುವನ್ನು ಒಪ್ಪಲಾರದೆ, ದೇವಸ್ಥಾನ ಒಂದರಲ್ಲಿ ನಿಂತು ಭಗವದ್ಭಕ್ತಿಯ ತಮ್ಮ ಜೀವನಕ್ರಮವನ್ನು ಪ್ರಾರಂಭಿಸಿದರು. ಸಾಂಪ್ರದಾಯಿಕ ಕಥೆಯಂತೆ ಅಲ್ಲಿ ಅವರಿಗೆ **'ಶ್ರೀಮಾನ್ ಪರಂ ತತ್ತ್ವಮಹಂ, ಮತಂ ಮೇ ಭೇದಮ್'** ಎಂದರೆ 'ನಾನೇ ಪರತತ್ತ್ವ ; ಭೇದವೇ ನನ್ನ ದೃಷ್ಟಿ' ಎಂದು ಭಗವಂತನಿಂದಲೇ ನೇರ ಬೋಧೆಯಾಯಿತು. ಅನಂತರ ಅವರು ಪೆರಿಯನಂಬಿ ಎಂಬುವರನ್ನು ಭೇಟಿಯಾಗಿ ವೇದಾಂತದ ರಹಸ್ಯಗಳನ್ನರಿತರು. ಮುಂದೆ ಗೃಹತ್ಯಾಗ ಮಾಡಿ ಸಂನ್ಯಾಸಿಯಾಗಿ 'ಯತಿರಾಜ' ಎಂದು ಹೆಸರಾದರು.

ರಾಮಾನುಜರ ಕಾಲದಲ್ಲೇ ರಚಿತವಾದ ಅವರ ಒಂದು ಜೀವನಚರಿತ್ರೆಯ ಪ್ರಕಾರ, ಅವರು ಯಾದವಪ್ರಕಾಶರ ಬಳಿ ಅಧ್ಯಯನ ಮಾಡಿದ್ದು ೧೦೩೩ರಲ್ಲಿ; ಶ್ರೀರಂಗಕ್ಕೆ ಬಂದು ಯಾಮುನಾಚಾರ್ಯರೆಂಬ ಗುರುವನ್ನು ಭೇಟಿಯಾಗಿದ್ದು

೧೦೪೯ರಲ್ಲಿ; ಶೈವರಾಜ ರಾಜೇಂದ್ರ ಚೋಳನ ಉಪಟಳ ತಾಳಲಾರದೆ ಮೈಸೂರಿನ ಕಡೆಗೆ ಪಲಾಯನ ಮಾಡಿದ್ದು ೧೦೯೬ರಲ್ಲಿ; ಅಲ್ಲಿನ ಬಿಟ್ಟಿದೇವನೆಂಬ ಜೈನ ರಾಜನನ್ನು ವೈಷ್ಣವಧರ್ಮಕ್ಕೆ ಪರಿವರ್ತಿಸಿ ವಿಷ್ಣುವರ್ಧನ ಎಂಬ ಹೆಸರನ್ನು ಕೊಟ್ಟದ್ದು ೧೦೯೮ರಲ್ಲಿ; ಶ್ರೀರಂಗಕ್ಕೆ ಹಿಂದಿರುಗಿದ್ದು ೧೧೧೮ರಲ್ಲಿ; ದೇಹತ್ಯಾಗ ಮಾಡಿದ್ದು ೧೧೩೭ರಲ್ಲಿ (ಎಂದರೆ ತಮ್ಮ ನೂರಿಪ್ಪತ್ತನೆಯ ವಯಸ್ಸಿನಲ್ಲಿ). ೧೧೧೭ ರಿಂದ ೧೧೨೭ರ ವರೆಗಿನ ಅವಧಿಯಲ್ಲಿ ಅವರು ಬಾದರಾಯಣ ಬ್ರಹ್ಮಸೂತ್ರಗಳಿಗೆ ತಮ್ಮ **ಶ್ರೀಭಾಷ್ಯ**ವನ್ನು ಬರೆದರು. ಇದಲ್ಲದೆ ಭಗವದ್ಗೀತೆಯ ಮೇಲೆ **ಗೀತಾಭಾಷ್ಯ** ಹಾಗೂ **ವೇದಾರ್ಥಸಂಗ್ರಹ, ವೇದಾಂತಸಾರ** ಮತ್ತು **ವೇದಾಂತದೀಪ** ಎಂಬ ಗ್ರಂಥಗಳನ್ನೂ ಬರೆದರು. ಸಾಂಪ್ರದಾಯಿಕವಾಗಿ ನಂಬಲಾಗಿರುವಂತೆ, ವೈಷ್ಣವ ಸಂತರಾಗಿ ಪ್ರಭಾವಶಾಲಿಗಳಾಗಿದ್ದ ಅವರು, ೭೪ ಸಂಸ್ಥಾನ ಸಿಂಹಾಸನಗಳ ಮೂಲಕ ಆಳಿದರು! ಅವರ ಅನುಯಾಯಿಗಳಲ್ಲಿ ೭೦೦ ತಪಸ್ವಿಗಳು, ೧೨೦೦೦ ಸಂನ್ಯಾಸಿಗಳು ಹಾಗೂ ೩೦೦ ಸಂನ್ಯಾಸಿನಿಯರಿದ್ದರು! ಗೃಹಸ್ಥರ ಆಧ್ಯಾತ್ಮಿಕ ಜೀವನಕ್ಕೆ ಸಹಾಯ ಮಾಡುವ ಸುಮಾರು ೭೦೦ ಮಠಗಳನ್ನಲ್ಲದೆ, ಐದು ಸಂನ್ಯಾಸಿ ಮಠಗಳನ್ನೂ ಅವರು ಸ್ಥಾಪಿಸಿದರು.

ಎಂಟನೆಯ ಶತಮಾನದಲ್ಲಿ ದಕ್ಷಿಣಭಾರತದಲ್ಲಿ ಅರಳಲಾರಂಭಿಸಿದ ವೈಷ್ಣವಭಕ್ತಿಯ ಪುಷ್ಪವು ತಮಿಳು ಕಾವ್ಯದ ಮೂಲಕ ತನ್ನ ಪರಿಮಳವನ್ನು ಬೀರತೊಡಗಿತು. ಹತ್ತನೆಯ ಶತಮಾನದ ಹೊತ್ತಿಗೆ ಈ ಹಾಡುಗಳು ವೈಷ್ಣವ ಆಂದೋಳನದ ಶ್ರುತಿಗಳೆನ್ನಿಸಿಕೊಂಡವು. ದೈವಭಕ್ತಿಯ ಬಹು ಶಕ್ತಿಶಾಲಿ ಅಭಿವ್ಯಕ್ತಿಗಳಾದ ಈ ಹಾಡುಗಳು ಆಳ್ವಾರುಗಳೆಂಬ ಅನೇಕ ಭಕ್ತಸಂತರಿಂದ ರಚಿಸಲ್ಪಟ್ಟವು. ಸುಮಾರು ನಾಲ್ಕುಸಾವಿರ ಸಂಖ್ಯೆಯ ಈ ಹಾಡುಗಳನ್ನು ನಾಥಮುನಿ ಎಂಬುವವರು ಕ್ರಿ. ಶ. ೧೦೦೦ದಲ್ಲಿ ಸಂಗ್ರಹಿಸಿದರು; ಈ ಸಂಗ್ರಹ 'ತಮಿಳುವೇದ'ವೆಂದೇ ಪ್ರಸಿದ್ಧಿ ಪಡೆಯಿತು. ಭಾಗವತ ಹಾಗೂ ವಿಷ್ಣುಪುರಾಣದ ಅನೇಕ ಕಥೆಗಳನ್ನೊಳಗೊಂಡಿರುವ ಈ ಹಾಡುಗಳಿಂದ ರಾಮಾನುಜರು ತಮ್ಮ ಹೊಸ ಚಿಂತನೆಗೆ ಸ್ಫೂರ್ತಿಯನ್ನು ಪಡೆದರು. ಡಾ. ಎಸ್. ರಾಧಾಕೃಷ್ಣನ್ ತಮ್ಮ Indian Philosophy ಪುಸ್ತಕದಲ್ಲಿ, "study of their works helped him to develop elements which otherwise would have remained latent in the Upnishads and in the Brahmasutras" (ಆ ಕೃತಿಗಳ ಅಧ್ಯಯನವು ಅವರಿಗೆ ಉಪನಿಷತ್ತುಗಳಲ್ಲಿ ಹಾಗೂ ಬ್ರಹ್ಮಸೂತ್ರಗಳಲ್ಲಿ ಸುಪ್ತವಾಗಿ ಉಳಿದುಹೋಗಬಹುದಾಗಿದ್ದ ಅನೇಕ ವಿಶಿಷ್ಟ ಸಂಗತಿಗಳನ್ನು ಹೊರತರಲು ಸಹಾಯವಾಯಿತು) ಎಂದಿದ್ದಾರೆ. ಹೀಗೆ ರಾಮಾನುಜರಿಗೆ ವೈಷ್ಣವಧರ್ಮವನ್ನೂ ವೇದಾಂತವನ್ನೂ ಒಗ್ಗೂಡಿಸಲು ನೆರವಾದ ಅವರ ಗುರು ಯಾಮುನಾಚಾರ್ಯರು, ಆಳ್ವಾರುಗಳ ಗೀತೆಗಳನ್ನು ಸಂಗ್ರಹಿಸಿದ ನಾಥಮುನಿಯ ಮೊಮ್ಮಗ ಎನ್ನುವುದು ವಿಶೇಷ.

ತತ್ತ್ವಶಾಸ್ತ್ರದ ಇತಿಹಾಸದಲ್ಲಿ ಕವಿಗಳ ಪ್ರಭಾವ ತಾತ್ತ್ವಿಕರ ಮೇಲೆ ಆಗಿರುವುದು ಬಹುಶಃ ಇಲ್ಲಿ ಮಾತ್ರವೇ ಎನ್ನಬಹುದು. ಗ್ರೀಕ್ ತತ್ತ್ವಜ್ಞ ಎಪಿಕ್ಯೂರಸ್ ಲ್ಯಾಟಿನ್ ಕವಿ ಲ್ಯೂಕ್ರಿಟಿಯಸ್ಸನ ಮೇಲೆ, ಮಧ್ಯಯುಗದ ಥಾಮಸ್ ಆಕ್ವಿನಾಸ್ ಡಿವೈನ್ ಕಾಮೆಡಿ ಬರೆದ ಡಾಂಟೆಯ ಮೇಲೆ, ಕ್ಯಾಂಟ್ ಮಹಾಶಯ ಕೊಲರಿಜ್ ಮೇಲೆ, ಪ್ಲೇಟೋ ಷೆಲ್ಲಿಯ ಮೇಲೆ ಪ್ರಭಾವ ಬೀರಿದರೆಂದು ನಾವು ಚರಿತ್ರೆಯಲ್ಲಿ ಓದುತ್ತೇವೆ. ಆದರೆ ಕವಿಗಳೇ ತಾತ್ತ್ವಿಕನೊಬ್ಬನ ಮೇಲೆ ಪ್ರಭಾವ ಬೀರಿದರೆಂದರೆ? ಇದು ರಾಮಾನುಜರ ತತ್ತ್ವದಲ್ಲಿರುವ ಬಹುಮುಖ್ಯವಾದ ಭಕ್ತಿಭಾವಕ್ಕೆ ಕಾರಣವೆಂಬುದರಲ್ಲಿ ಸಂಶಯವಿಲ್ಲ. ರಾಮಾನುಜರನ್ನೇ ಒಬ್ಬ 'ಭಕ್ತಿಭಾವದ ಗದ್ಯಕವಿ' ಎನ್ನಬಹುದು.

ಭಾಗವತವು ಸುಮಾರು ಕ್ರಿ. ಶ. ೯೦೦ರ ಸುಮಾರಿಗೆ ಬರೆಯಲ್ಪಟ್ಟಿರಬಹುದೆಂಬ ಅಭಿಪ್ರಾಯವಿದೆ. ಈ ಭಕ್ತಿ ಪ್ರಧಾನ ಪುರಾಣದಲ್ಲಿ ಕಲ್ಪನೆಗಳೇ ರೂಪು ತಳೆಯುತ್ತವೆ, ಭಗವಂತನೇ ಭೂಮಿಯಲ್ಲಿ ಅವತರಿಸಿ ಚರಿತ್ರೆಯಲ್ಲಿ, ಕಾಲದಲ್ಲಿ ಪ್ರವರ್ತಿಸುತ್ತಾನೆ. ವಿಶ್ವಾದರ್ಶವಾಗಿದ್ದುದು ಜೀವಂತ ವ್ಯಕ್ತಿಯಾಗಿ, ಸಂವೇದನೆಯಾಗುತ್ತದೆ. ರಾಮಾನುಜರ ಪ್ರಕಾರ, ಪ್ರಪಂಚವು ಸತ್ಯವಾಗುವುದು ಭಗವಂತ ಸೃಷ್ಟಿಸಿದ ಎಂಬುದರಿಂದ ಮಾತ್ರವಲ್ಲ, ಅವನೇ ತನ್ನ ಲೀಲೆಗಾಗಿ ಪ್ರಪಂಚಕ್ಕೆ ಇಳಿದುಬರುವುದರಿಂದ. ಭಗವಂತ ಸತ್ಯವೆಂದ ಮೇಲೆ ಅವನ ಸೃಷ್ಟಿ ಸತ್ಯವಲ್ಲವೆ? ಈ ಭೂಮಿ, ಅದರ ಅದ್ಭುತವಾದ ವಾತಾವರಣ, ಈ ಆಕಾಶವೆಂಬ ನಮ್ಮ ತಲೆಯ ಮೇಲಿನ ಸೂರು, ಅದರಲ್ಲಿನ ಸುವರ್ಣವರ್ಣದ ಸೂರ್ಯ – ಇವೆಲ್ಲ ಭಗವಂತನದ್ದೇ ಭಾಗಗಳು; ಅವನ ವಾಸಸ್ಥಾನ. ಇದನ್ನು ಮಾಯೆ, ಭ್ರಮೆ, ಮಿಥ್ಯೆ ಎಂದು ತಿರಸ್ಕರಿಸಬಹುದೆ?

ರಾಮಾನುಜರ ವೇದಾಂತತತ್ತ್ವವನ್ನು ನಾವು ಅದರ ಪೌರಾಣಿಕ, ಕಾವ್ಯಮಯ ಹಿನ್ನೆಲೆಯಲ್ಲಿ ಪರಿಗಣಿಸಬೇಕು. ಭಗವತ್ಪ್ರೇಮ ಹಾಗೂ ಭಗವಂತನ ವಾಸಸ್ಥಾನ – ಈ ಎರಡೂ ರಾಮಾನುಜರ ಧಾರ್ಮಿಕ ಕಲ್ಪನೆಯೆಂಬ ಪಕ್ಷಿಯ ಎರಡು ರೆಕ್ಕೆಗಳು. ಭಗವತ್ಪ್ರೇಮವಿರುವುದು ನಿಜಪ್ರಪಂಚದಲ್ಲಿ; ನಿಜಪ್ರಪಂಚದಲ್ಲಿರುವ ವೈವಿಧ್ಯವನ್ನು ನಾವು ಒಪ್ಪಿಕೊಂಡರೂ, ಆಧ್ಯಾತ್ಮಿಕ ಅನುಭಾವದ ಪರಾಕಾಷ್ಠೆಯಲ್ಲಿ ಈ ವೈವಿಧ್ಯದ ಮೂಲಸ್ರೋತ ಭಗವಂತನೇ ಹೊರತು ಇನ್ನೇನೂ ಅಲ್ಲ ಎಂಬ ಸಾಕ್ಷಾತ್ಕಾರವಾಗುವುದು. ಭಕ್ತಿಯನ್ನು ನಾವು ಭಗವಂತನೆಡೆಗೆ ನಿರ್ದೇಶಿಸುವೆವು; ಭಗವಂತನು ಅದನ್ನು ಸ್ವೀಕರಿಸುವನು. ರಾಮಾನುಜರು ಇದಕ್ಕೆ ಒಂದು ಹೊಸ ಆಯಾಮವನ್ನು ಕೊಡುವರು. ತಾವು ಭಾಷ್ಯವನ್ನು ಬರೆದ ಭಗವದ್ಗೀತೆಯನ್ನು ಅವರು 'ಭಕ್ತಿಕಾವ್ಯ' ವೆಂದು ಕರೆಯುವರು; ಅಲ್ಲದೆ, ಭಗವಂತನೇ ಮುಖ್ಯಪಾತ್ರವಾದ, ಭಗವತ್ಪ್ರೇಮದ ಒಂದು ವಿಶಿಷ್ಟ 'ದಿವ್ಯಲೀಲಾನಾಟಕ' ಎನಿಸಿದ ಭಾಗವತದೊಂದಿಗೆ ಅದನ್ನು ತಳುಕು ಹಾಕುವರು. ರಾಮಾನುಜರ ಪಾಲಿಗೆ ಈ ದಿವ್ಯಪ್ರೇಮ ಎಷ್ಟರಮಟ್ಟಿಗೆ ಮಾನವನ ಭಗವತ್ಪ್ರೀತಿಯೋ, ಅಷ್ಟೇಮಟ್ಟಿಗೆ